**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ.1229/2017</u>**

**<u>ಪಿಡಬ್ಲ್ಯೂ-2</u>**

**<u>ಸಿಡಬ್ಲ್ಯೂ-3</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರವೀಣ್ |
| ತಂದೆಯ ಹೆಸರು | - | ಶಿವಲಿಂಗಪ್ಪ |
| ವಯಸ್ಸು | - | 35 |
| ಕೆಲಸ | - | ಪೋಲೀಸ್ ಪೇದೆ (ಸಿಪಿಸಿ) |
| ವಾಸ | - | ಕೆ ಆರ್ ನಗರ |

**<u>ದಿನಾಂಕ 27-12-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ಜೂನ್ 2016 ರಿಂದ ಪ್ರಸ್ತುತ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ25.12.2016 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ಡೋರನಹಳ್ಳಿ ಚರ್ಚ್ ಬಳಿ ಸಾಂಸ್ಕೃತಿಕ ಕಾರ್ಯಕ್ರಮ ಇದ್ದ ನಿವಿತ್ಯ ಚಾಸಾ 13 ರವರ ಆದೇಶದ ಮೇರೆಗೆ ನಾನ್ನನ್ನು ಹಾಗೂ ಚಾಸಾ 1 ಮತ್ತು 2 ರವರನ್ನು ಅಲ್ಲಿ ಬಂದೊಬಸ್ತಿಗಾಗಿ ನಿಯೋಜನೆ ಮಾಡಲಾಗಿತ್ತು. ಸದರಿ ದಿನದಂದು ಸಂಜೆ 6.00 ಗಂಟೆ ಸಮಯದಲ್ಲಿ ಡೋರನಹಳ್ಳಿ ಗ್ರಾಮದ ಸೆಂಟ್ ಆಂಥೋನಿ ಚರ್ಚ್ ಮುಂಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿತ್ತು.

ಆರೋಪಿ 1 ಮತ್ತು 2 ರವರು ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯತ್ತಿರುವಾಗ ಅಲ್ಲಿ ಜೋರಾಗಿ ಕೇಕೆ ಹಾಕುವ ಮುಖಾಂತರ ಸಾರ್ವಜನಿಕರಿಗೆ ಮುಜುಗರ ಉಂಟಾಗುವ ರೀತಿ ಅಸಭ್ಯವಾಗಿ ವರ್ತನೆ ಮಾಡಿ ಅವಾಚ್ಯ ಶಬ್ದಗಳನ್ನು ಬೋಳಿ ಮಕ್ಕಳಾ ಎಂದು ಜೋರಾಗಿ ಕೂಗಾಡುತ್ತಿದ್ದರು. ಸದರಿಯನ್ನು ಗಮನಿಸಿ ನಾನು, ಚಾಸಾ 1 ಮತ್ತು 2 ರವರು ಆರೋಪಿ 1 ಮತ್ತು 2 ರವರಿಗೆ ಈ ರೀತಿ ವರ್ತನೆ ಮಾಡಬೇಡಿ ಎಂದು ಹೇಳಿದಾಗ ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಇದು ನಮ್ಮ ಊರು ನೀನು ಯಾರು ನಮ್ಮನ್ನು ಕೇಳೋಕೆ ಎಂದು ಹೇಳಿ ಬೋಳಿ ಮಕ್ಕಳಾ ಇಲ್ಲಿಂದ ಹೊರಟು ಹೋಗಿ ಎಂದು ಅವಾಚ್ಯ ಶಬ್ದಗಳಿಂದ ನಮ್ಮನ್ನು ಬೈದು ತಳ್ಳಾಡಿದರು.

ನಂತರ ಅಲ್ಲಿಯೇ ಇದ್ದ ಚಾಸಾ 4 ಮತ್ತು 5 ರವರು ಆರೋಪಿ 1 ಮತ್ತು 2 ರವರನ್ನು ಸಮಾಧಾನ ಪಡಿಸಿ ಅವರನ್ನು ನಾವು ವಶಕ್ಕೆ ಪಡೆದುಕೊಂಡೆವು. ನಂತರ ವಶಕ್ಕೆ ಪಡೆದಾಗ ಅವರ ಹೆಸರು ಹಾಗೂ ವಿಳಾಸವನ್ನು ವಿಚಾರಿಸಲಾಗಿ ಆರೋಪಿಗಳು ತಮ್ಮ ಹೆಸರು ಶರತ್ ಹಾಗೂ ಆಂಥೋನಿ ರಾಜ್ ಎಂದು ತಿಳಿಸಿದರು.

ಹೀಗೆ ವಶಕ್ಕೆ ಪಡೆದ ಆರೋಪಿಗಳನ್ನು ಕೆ ಆರ್ ನಗರ ಪೋಲೀಸ್ ಠಾಣೆಗೆ ಸಂಜೆ 7.00 ಗಂಟೆ

ಸಮಯದಲ್ಲಿ ಕರೆದುಕೊಂಡು ಬಂದೆವು. ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರುತಿಸಿದ್ದು 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆ ಬಗ್ಗೆ ವಕೀಲರು ವಿನಾಯತಿ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿಯ ಗುರುತಿಸಿನ ತಕರಾರು ಇರುವುದಿಲ್ಲ.

**ಪಾಟೀ ಸವಾಲು: ಶ್ರೀ. ಕೆ ಎನ್ ಎಸ್  ವಕೀಲರಿಂದ 1 ಮತ್ತು 2 ನೇ ಆರೋಪಿ ಪರ ವಕೀಲರುಃ**

ಸದರಿ ದಿನದಂದು ನಮ್ಮ ಪೋಲೀಸ್ ಠಾಣೆಯಿಂದ 3 ಜನ ಸಿಬ್ಬಂದಿಗಳನ್ನು ಬದ್ರತೆಗಾಗಿ ನಿಯೋಜನೆ ಮಾಡಲಾಗಿತ್ತು. ನಮಗೆ ಈ ರೀತಿ ಬೇರೆ ಕಡೆ ಕರ್ತವ್ಯದ ನಿಮಿತ್ಯ ನಿಯೋಜನೆ ಮಾಡುವ ಬಗ್ಗೆ ಠಾಣಾ ಡೈರಿಯಲ್ಲಿ ಸಬ್ ಇನ್ಸಪೆಕ್ಟರ್ ಇವರು ನಮೂದು ಮಾಡುತ್ತಾರೆ. ಸದರಿ ಸಾಂಸ್ಕೃತಿಕ ಕಾರ್ಯಕ್ರಮದ ಸಮಯದಲ್ಲಿ ಅಲ್ಲಿ ಸುಮಾರು 100-150 ಜನ ಹಾಜರಿದ್ದರು.

ಸಾಮಾನ್ಯವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉತ್ತೇಜನಗೊಳಿಸಲು ಚಪ್ಪಾಳೆ ಮತ್ತು ಶಿಳ್ಳೆ ಹಾಕುತ್ತಾರೆ ಎಂದರೆ ಸರಿ. ಸದರಿ ದಿನದಂದು 1 ಮತ್ತು 2 ನೇ ಆರೋಪಿಗಳನ್ನು  ಹೊರತುಪಡಿಸಿ ಇನ್ಯಾರಾದರೂ ಚಪ್ಪಾಳ ಹಾಗೂ ಶಿಳ್ಳೆಯನ್ನು ಹಾಕುತ್ತಿದ್ದರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಉಳಿದವರು ಚಪ್ಪಾಳೆ ಮಾತ್ರ ಹಾಕುತ್ತಿದ್ದರು ಶಿಳ್ಳೆ ಯಾರು ಹಾಕುತ್ತಿರಲಿಲ್ಲ ಆರೋಪಿತರು ಮಾತ್ರ ಶಿಳ್ಳೆ ಹಾಕುತ್ತಿದ್ದರು ಎಂದು ನುಡಿಯುತ್ತಾರೆ.

ಆರೋಪಿತರು ಹಾಕುತ್ತಿರುವ ಚಪ್ಪಾಳೆಯಿಂದ ನಡೆಯುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮ ಏನಾದರೂ ನಿಂತು ಹೋಯಿತಾ ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ಕಾರ್ಯಕ್ರಮವನ್ನು ಆಯೋಜಿಸಿದ ಆಯೋಜಕರು ಸದರಿ ಆರೋಪಿಗಳ ವರ್ತನೆಯಿಂದ ಕಾರ್ಯಕ್ರಮಕ್ಕೆ ಅಡ್ಡಿಯಾಗುತ್ತಿದೆ ಎಂದು ಹೇಳಿ ಯಾವುದಾದರೂ ಮೌಖಿಕ ಅಥವಾ ಲಿಖಿತ ದೂರನ್ನು ನಿಮಗೆ ಆ ಸಮಯದಲ್ಲಿ ನೀಡಿದ್ದರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿತರು ಹಾಕುತ್ತಿದ್ದ ಕೇಕೆ ಮತ್ತು ಚಪ್ಪಾಳೆ ಬಗ್ಗೆ ಸಾರ್ವಜನಿಕರು ನಮಗೆ ತೊಂದರೆ ಆಗುತ್ತಿದೆ ಎಂದು ಹೇಳಿ ಯಾವುದೇ ದೂರನ್ನು ನಮಗೆ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವೇ ಸ್ಥಳದಲ್ಲಿ ಕರ್ತವ್ಯ ನಿರತರಾದ್ದರಿಂದ ಅದನ್ನು ಗಮನಿಸಿರುತ್ತೇವೆ ಎಂದು ನುಡಿಯುತ್ತಾರೆ.

ಸಾರ್ವಜನಿಕ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸಂಬಂದಪಟ್ಟ ಚರ್ಚ್ನವರು ಸಿಸಿ ಕ್ಯಾಮರಾ ಅಳವಡಿಸಿದ್ದರು ಎಂದರೆ ಸಾಕ್ಷಿ ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿ 1 ಮತ್ತು 2 ರವರು ಹಾಕುತ್ತಿರುವ ಚಪ್ಪಾಳೆಯಿಂದ ನಿಮಗೆ ಏನು ತೊಂದರೆ ಆಯಿತು ಎನ್ನುವ ಪ್ರಶ್ನೆಗೆ ಸಾಕ್ಷಿ ಚಪ್ಪಾಳೆ ಜೊತೆಗೆ ಅವಾಚ್ಯ ಶಬ್ದಗಳಾದ ಬೋಳಿ ಮಕ್ಕಳಾ ಸೂಳೆ ಮಕ್ಕಳಾ ಎಂದು ಹೇಳಿ ಬೈದಾಗ ನಾವುಗಳು ಅವರಿಗೆ ಈ ರೀತಿ ಅಸಬ್ಯವಾಗಿ ವರ್ತಿಸಬೇಡಿ ಎಂದು ಹೇಳಿದಾಗ ಅವರು ನಿವ್ಯಾರು ಅದನ್ನುಕೇಳಿದ್ದಕ್ಕೆ ಬೋಳಿ ಮಕ್ಕಳಾ ಇದು ನಮ್ಮಊರು ನೀವು ಇಲ್ಲಿಂದ ಹೊರಟು ಹೋಗಿ ಎಂದು ಹೇಳಿ ತಳ್ಳಾಡಿದರು ಎಂದು ನುಡಿಯುತ್ತಾರೆ.

1 ಮತ್ತು 2ನೇ ಆರೋಪಿ ಇವರು ನಿಮ್ಮನ್ನು ತಳ್ಳಾಡಿದ ಪರಿಣಾಮವಾಗಿ ನೀವು ಧರಿಸಿದ ಸಮವಸ್ತ್ರ ಹರಿಯಿತಾ ಅಥವಾ ನೀವು ಹಾಕಿರುವ ಟೋಪಿ ಕೆಳಗಡೆ ಬಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಈ ಘಟನೆ ಆದ ನಂತರ ಕೂಡ ಸಾಂಸ್ಕೃತಿಕ ಕಾರ್ಯಕ್ರಮ ನಿಲ್ಲದೇ ಮುಂದುವರೆಯಿತು ಹಾಗೂ ನವು ನಮ್ಮ ಕರ್ತವ್ಯವನ್ನು ಮುಂದುವರೆಸಿಕೊಂಡು ಹೋದೆವು ಎಂದರೆ ಸರಿಯಲ್ಲ.

1 ಮತ್ತು 2 ನೇ ಆರೋಪಿಗಳನ್ನು ಸದರಿ ಕಾರ್ಯಕ್ರಮ ಮುಗಿದ ಎಷ್ಟು ಗಂಟೆಯ ನಂತರ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿರಿ ಎನ್ನುವ ಪ್ರಶ್ನೆಗೆ ಸಾಕ್ಷಿ ಕಾರ್ಯಕ್ರಮ ಮುಗಿದಿರುವುದಿಲ್ಲ ಕಾರ್ಯಕ್ರಮ ನಡೆಯುವ ಸಂದರ್ಬದಲ್ಲಿಯೇ ಅವರನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ.

1 ಹಾಗೂ 2 ನೆ ಆರೋಪಿ ಇವರು ಸದರಿ ಗ್ರಾಮದವರು ಅಲ್ಲ ಅವರು ಕೊಡಗಿನಿಂದ ಬಂದವರು ಎನ್ನುವ ಸೂಚನೆಗೆ ಸಾಕ್ಷಿ 1ನೇ ಆರೋಪಿ ಮಾತ್ರ ಕೊಡಗಿನಿಂದ ಬಂದವರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 2ನೇ ಆರೋಪಿ ಅದೇ ಗ್ರಾಮದವರು ಎಂದು ನುಡಿಯುತ್ತಾರೆ.

1 ಹಾಗೂ 2 ನೇ ಆರೋಪಿ ಇವರು ಸದರಿ ದಿನದಂದು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಹಾಗೇನಾದರು ಅಡ್ಡಿ ಪಡಿಸಿದ್ದೇ ಆದರೆ ಸಾಂಸ್ಕತಿಕ ಕಾರ್ಯಕ್ರಮ ಅರ್ದದಲ್ಲಿ ನಿಲ್ಲುತಿತ್ತು ಆ ರೀತಿ ಕಾರ್ಯಕ್ರಮ ನಿಲ್ಲಲಿಲ್ಲ ಹಾಗಾಗಿ ನಾನು ಆರೋಪಿಗಳು ಯಾವುದೇ ಕರ್ತವ್ಯಕ್ಕೆ ಅಡ್ಡಿ ಪಡಿಸದಿದ್ದರೂ ಸಹ ನಾನು ಅವರ ವಿರುದ್ದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿಗಳು ಯಾವುದೇ ರೀತಿ ಇಂದ ನನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ಯಾವುದೇ ಅನುಚಿತ ವರ್ತನೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಸಾರ್ವಜನಿಕರು ಪೋಲೀಸರನ್ನು ನೋಡಿ ಹೆದರುವುದರಿಂದ ಆರೋಪಿಗಳು ಆ ರೀತಿ ಯಾವುದೇ ದುರ್ವರ್ತನೆ ಮಾಡಿ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ಈ ರೀತಿ ವರ್ತನೆ ಮಾಡಿದ್ದೇ ಆದರೆ ಅಲ್ಲಿ ಸಂಸ್ಥೆಯವರು ಅಳವಡಿಸಿದ ಸಿಸಿ ಕ್ಯಾಮರಾದಲ್ಲಿ ಪರಿಶೀಲಿಸಿದ ನಂತರ ದೂರನ್ನು ದಾಖಲಿಸುತ್ತಿದ್ದೆ ನಾನು ಸಿಸಿ ಕ್ಯಾಮರಾವನ್ನು ಪರಿಶೀಲಿಸದೇ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ